MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - FRIDAY 8-7-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಬಿಹಾರದಲ್ಲಿ ಜೋಳ ಇಳಿಕೆ

ರಫ್ತು ಇಳಿಕೆ ಹಾಗೂ ಸ್ಥಳೀಯ ಬೇಡಿಕೆ ಇಳಿಕೆಯಿಂದ ಬಿಹಾರದಲ್ಲಿ ಜೋಳ ದರ ಇಳಿಕೆಯಾಗಿದೆ. ದಾವಣಗೆರೆಯಲ್ಲಿ ದರ ಸ್ಥಿರವಿದ್ದು ಬೇಡಿಕೆ ಹಾಗೂ ಪೂರೈಕೆ ಸ್ಥಿರವಿದ್ದು, ಜೋಳ ಇಳಿಕೆಯಾಗಿದೆಯೆನ್ನಲಾಗಿದೆ. ಬೈಕಾಡಿ ಜಿಲ್ಲೆಯಲ್ಲಿ ಮಳೆಯಿಂದ ಜೋಳ ಬೆಳೆ ಹಾನಿಯಾಗಿದೆಯೆನ್ನಲಾಗಿದೆ. ಜಿಲ್ಲೆಯಲ್ಲಿ 1450 ಹೆಕ್ಟೇರ್ ಪ್ರದೇಶದಲ್ಲಿ ಜೋಳ ಬೆಳೆಯಲಾಗುತ್ತಿದೆಯೆನ್ನಲಾಗಿದೆ. ಆರ್ಮಿ ವರ್ಮ್ ಹಾವಳಿ ಹಾಗೂ ಕಾಡುಪ್ರಾಣಿಗಳ ಉಪಟಳದಿಂದಲೂ ಬೆಳೆ ನಾಶವಾಗಿದೆಯೆನ್ನಲಾಗಿದ್ದು, ಜೋಳ ಉತ್ಪಾದನೆ ಇಳಿಕೆಯಾಗಲಿದೆಯೆನ್ನಲಾಗಿದೆ.

## ಖಾದ್ಯತೈಲ ಕೈಗಾರಿಕೆಗಳಿಂದ ಖಾದ್ಯತೈಲದರ ಲೀಟರ್‌ಗೆ 10–15 ಇಳಿಕೆಗೆ ಒಪ್ಪಿಗೆ

ಈ ಮೊದಲೇ ಖಾದ್ಯತೈಲ ತಯಾರಕರು ವಿವಿಧ ಬ್ರಾಂಡ್‌ಗಳ ಖಾದ್ಯ ತೈಲಬೆಲೆ ಲೀಟರ್‌ಗೆ ರೂ. 10–20 ದರ ಇಳಿಕೆ ಮಾಡಿದ್ದು ಇನ್ನೂ 10–15 ದರ ಇಳಿಕೆಗೆ ಒಪ್ಪಿಗೆ ನೀಡಿದೆಯೆನ್ನಲಾಗಿದೆ. ಆಹಾರ ಕಾರ್ಯದರ್ಶಿ ಸುಧಾಂಶು ಪಾಂಡೆ ದರ ಇಳಿಕೆ ಮಾಡುವುದರ ಜೊತೆ ದೇಶದಾದ್ಯಂತ ಏಕರೂಪದ ದರವಿರುವಂತೆ ನೋಡಿಕೊಳ್ಳಬೇಕೆಂದು ಖಾದ್ಯತೈಲ ತಯಾರಕರಿಗೆ ಮನವಿ ಮಾಡಿದರೆನ್ನಲಾಗಿದೆ. ಜೂನ್ ಒಂದರಿಂದ ಜುಲೈ ಒಂದರ ತನಕ ಆಮದಾದ ಕಚ್ಚಾ ಪಾಮೆಣ್ಣೆ ದರ 24 ಶೇಕಡಾ, ಸೂರ್ಯಕಾಂತಿ ಎಣ್ಣೆ 17.4 ಶೇಕಡಾ ಹಾಗೂ ಸೋಯಾಬೀನ್ ಎಣ್ಣೆ 12.2 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ. ಕೆಲವು ದಿನಗಳಲ್ಲಿ ದರ ಇಳಿಕೆಯ ಉಪಯೋಗ ಜನ ಸಾಮಾನ್ಯರಿಗೆ ಸಿಗಲಿದೆಯೆನ್ನಲಾಗಿದೆ. ಜುಲೈ ತಿಂಗಳಲ್ಲಿ ಭಾರತದ ಪಾಮೆಣ್ಣೆ ಆಮದು ಹಿಂದಿನ ಸೆಪ್ಟೆಂಬರ್ ನಂತರ ಅತಿ ಹೆಚ್ಚಿನ ಪ್ರಮಾಣದ ಆಮದು ಮಾಡಲಿದೆಯೆಂದು ನಿರೀಕ್ಷಿಸಲಾಗಿದ್ದು, 7 ರಿಂದ 8 ಲಕ್ಷ ಟನ್‌ಗಳಿಗೇರಲಿದೆಯೆನ್ನಲಾಗಿದೆ. ಇಂಡೋನೇಶಿಯಾದ ರಫ್ತು ಕರ ಇಳಿಕೆ, ಹೆಚ್ಚಿನ ರಫ್ತಿಗೆ ಅವಕಾಶ ಹಾಗೂ ದರ ಇಳಿಕೆಯಿಂದ ಆಮದು ಹೆಚ್ಚಳವಾಗಲಿದೆಯೆನ್ನಲಾಗಿದೆ.

## ಜೋಳ, ಸೋಯಾ ದರ ಹೆಚ್ಚಳದಿಂದ ಮೊಟ್ಟೆ, ಚಿಕನ್ ದರ ಹೆಚ್ಚಳ

ಪೌಲ್ಟ್ರಿ ಆಹಾರಕ್ಕೆ ಉಪಯೋಗಿಸುವ ಜೋಳ ಹಾಗೂ ಸೋಯಾ ದರ ಹೆಚ್ಚಳದಿಂದ ಮೊಟ್ಟೆ, ಚಿಕನ್ ದರಗಳು ಬಹಳ ದುಬಾರಿಯಾಗಿವೆ. ಜೋಳ ಹಾಗೂ ಸೋಯಾ ದರಗಳು ಹಿಂದಿನ ದರಕ್ಕಿಂತ ಇಮ್ಮಡಿಗೊಂಡಿದೆ. ಇದರಿಂದ ಮೊಟ್ಟೆ, ಚಿಕನ್ ಉತ್ಪಾದನಾ ವೆಚ್ಚ ಇಮ್ಮಡಿಗೊಂಡಿದ್ದು, ಮೊಟ್ಟೆ ಹಾಗೂ ಚಿಕನ್ ದರಗಳ ಹೆಚ್ಚಳ ಅನಿವಾರ್ಯವೆನ್ನಲಾಗಿದೆ. ಅಮಿನೋ ಎಸಿಡ್ ಹಾಗೂ ವಿಟಮಿನ್ ದರಗಳು ಹೆಚ್ಚಳವಾಗಿವೆ.

## ಭಾರತ, ಚೀನಾದಿಂದ ಬೇಡಿಕೆ ಹೆಚ್ಚಳ, ಪಾಮೆಣ್ಣೆ ಫ್ಯೂಚರ್ ದರ ಹೆಚ್ಚಳ

ಹಿನ್ನಡೆ ಹಿಡಿದ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಎರಡನೇ ಸತತ ಎರಡನೇ ದಿನ ಹೆಚ್ಚಳವಾಗಿದೆ. ಈ ತಿಂಗಳಲ್ಲಿ ಭಾರತ ಹಾಗೂ ಚೀನಾದಿಂದ ಬೇಡಿಕೆ ಹೆಚ್ಚಳಗೊಂಡಿದ್ದರಿಂದ ಪಾಮೆಣ್ಣೆ ದರ ಹೆಚ್ಚಳಗೊಂಡಿದೆ. ಇಂಡೋನೇಶಿಯಾ ಪಾಮೆಣ್ಣೆ ರಫ್ತು ಲೆವಿ ದರ ಇಳಿಕೆಗೊಳಿಸಲು ಚಿಂತಿಸುತ್ತಿದೆಯೆನ್ನಲಾಗಿದೆ. ಅಲ್ಲಿಂದ ರಫ್ತು ಹೆಚ್ಚಳಗೊಳಿಸಲು ಪ್ರೋತ್ಸಾಹಿಸುವ ಸಲುವಾಗಿ ಇಂಡೋನೇಶಿಯಾ ಪಾಮೆಣ್ಣೆ ರಫ್ತು ಕಡಿತಗೊಳಿಸಿದೆಯೆನ್ನಲಾಗಿದೆ.

## 2022–23 ರಲ್ಲಿ ಛತ್ತೀಸ್‌ಗಡ್ ಸರಕಾರ ಬೆಂಬಲ ಬೆಲೆಗೆ ಬೇಳೆಕಾಳು ಖರೀದಿಗೆ ನಿರ್ಧಾರ

2022–23 ರ ಸಾಲಿನ ಉದ್ದು, ತೊಗರಿ ಹಾಗೂ ಹೆಸರುಕಾಳು ಬೆಂಬಲ ಬೆಲೆಗೆ ಖರೀದಿಸಲು ಛತ್ತೀಸ್‌ಗಡ್ ಸರಕಾರ ನಿರ್ಧರಿಸಿದೆಯೆನ್ನಲಾಗಿದೆ. ಭತ್ತ ಖರೀದಿ ಈ ಮೊದಲಿನಂತೆಯೇ ನಡೆಯಲಿದೆಯೆನ್ನಲಾಗಿದೆ.

## ICE ದುರ್ಬಲ ಮಾರುಕಟ್ಟೆ ವಿಯೆಟ್ನಾಂ, ಇಂಡೋನೇಶೀಯಾ ರಾಬೆಸ್ಟಾ ಕಾಫಿ ದರ ಇಳಿಕೆ

ICE ಮಾರುಕಟ್ಟೆಯಲ್ಲಿ ದರ ಇಳಿಕೆಯಾದ್ದರಿಂದ ವಿಯೆಟ್ನಾಂ, ಇಂಡೋನೇಶೀಯಾ ರಾಬೆಸ್ಟಾ ಕಾಫಿ ದರ ಇಳಿಕೆಯಾಗಿದೆಯೆನ್ನಲಾಗಿದೆ. ವಿಯೆಟ್ನಾಂನ ಕಾಫಿ ರಫ್ತು ಜೂನ್ ತಿಂಗಳಲ್ಲಿ ಮೇ ತಿಂಗಳಿಗಿಂತ 3.5 ಶೇಕಡಾ ಇಳಿಕೆಯಾಗಿ 137,403 ಟನ್‌ಗಳಾಗಿವೆಯೆನ್ನಲಾಗಿದೆ. 2022–23 ರಲ್ಲಿ ಜಾಗತಿಕ ಕಾಫಿ ಉತ್ಪಾದನೆ + 4.7 ಶೇಕಡಾ ಆಗಲಿದೆಯೆಂದು USDA ವರದಿ ಹೇಳಿದೆ. ಹೆಚ್ಚಳದಲ್ಲಿದ್ದ ಕಾಫಿ ದರಗಳು ದುರ್ಬಲವಾಗಿ ಇಳಿಕೆಯಾಗುತ್ತಿದೆ. ಆದರೆ ICE ಕಾಫಿ ದಾಸ್ತಾನು ಇಳಿಕೆಯಲ್ಲೇ ಮುಂದುವರಿಯುತ್ತಿದೆ.